**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 3062/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.01**

**ದಿನಾಂಕಃ** 04.10.2025 **ಸಿಡಬ್ಲ್ಯೂ**

01

| | |
|---|---|
| ಹೆಸರು | ನಾಗೇಂದ್ರಾಚಾರಿ |
| ತಂದೆ ಹೆಸರು | ರಂಗಪ್ಪ |
| ವಯಸ್ಸು | 75 ವರ್ಷ |
| ಉದ್ಯೋಗ | ಕಾರ್ಪೆಂಟರ್ |
| ವಾಸ ಸ್ಥಳ | ಬನ್ನಿಕೋಡು ಗ್ರಾಮ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.10 ನನ್ನ ಮಗ. ಚಾಸಾ.11 ರವರ ಪರಿಚಯವಿದೆ. ಸನ್ 2023 ರಲ್ಲಿ ರಾತ್ರಿ 10.30 ಗಂಟೆ ಸುಮಾರು ಮಲೆಬೆನ್ನೂರು ಬೂದಿಹಾಳ ರಸ್ತೆಯಲ್ಲಿ ನನ್ನ ಮಗನ ಬೈಕ ಮತ್ತು ಒಂದು ಟ್ರಾಕ್ಟರ್ ನಡುವೆ ಅಪಘಾತ ಸಂಬವಿಸಿರುತ್ತದೆ. ಈ ವಿಚಾರವನ್ನು ಚಾಸಾ.11 ರವರು ರಾತ್ರಿ 10.00 ಗಂಟೆ ಸುಮಾರಿಗೆ ಕರೆ ಮಾಡಿ ನಿಮ್ಮ ಮಗನಿಗೆ ಟ್ರಾಕ್ಟರ್ ನಿಂದ ಅಪಘಾತವಾಗಿದೆ ಮತ್ತು ಅವರನ್ನು ಸಿ ಜೆ ಆಸ್ಪತ್ರೆಗೆ ದಾಖಲು ಮಾಡಿದ್ದೇವೆ ಎಂದು ತಿಳಿಸಿದರು. ಆಗ ನಾನು ಸಿಜೆ ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ಮಗ ಚಾಸಾ.10 ರವರ ತಲೆ ಮತ್ತು ತೊಡೆ ಭಾಗಕ್ಕೆ ಪೆಟ್ಟು ಬಿದ್ದಿತ್ತು ಹಾಗೂ ಅವನ ಬಲಗೈ ಮುರಿದಿತ್ತು. ಒಂದು ವರೆ ತಿಂಗಳವರೆಗೆ ಚಾಸಾ.10 ಕೋಮಾದಲ್ಲಿ ಇದ್ದರು. ಚೇತರಿಸಿಕೊಂಡ ನಂತರ ಆತನ ಬಲಗೈ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ಸದರಿ ಅಪಘಾತ ನನ್ನ ಮಗ ದಾವಣಗೆರೆ ಕಡೆಯಿಂದ ಬೈಕನ್ನು ತೆಗೆದುಕೊಂಡು ಬರುವಾಗ ನಿಟ್ಟೂರು ಕಡೆಯಿಂದ ಬರುತ್ತಿದ್ದ ಒಂದು ಟ್ರಾಕ್ಟರ್ ಅತಿವೇಗವಾಗಿ ಬಂದು ನನ್ನ ಮಗನ ಬೈಕಿಗೆ ಡಿಕ್ಕಿ ಪಡಿಸಿ ಅಪಘಾತ ಸಂಬವಿಸಿರುತ್ತದೆ. ಸದರಿ ಟ್ರಾಕ್ಟರ್ ಚಾಲಕನ ಹೆಸರು ವಿಚಾರಿಸಲಾಗಿ ಆತನ ಹೆಸರು ಹನುಮಂತಪ್ಪ ಎಂದು ತಿಳಿಯಿತು. ನಂತರ ಮಾರನೇ ದಿನ ಅಂದರೆ ದಿಃ 01.12.2023 ರಂದು ನಾನು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು. ನನ್ನ ಮಗನ ಬೈಕ್ ನಂ. ಕೆಎ /17/9672.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಅಪಘಾತವಾದ ರಸ್ತೆ ನಿಟ್ಟೂರು ಗ್ರಾಮದ ಮುಖಾಂತರ ದಾವಣಗೆರೆಗೆ ತಲುಪುವ ಮುಖ್ಯ ರಸ್ತೆ ಎಂದರೆ ಸರಿ. ಅಪಘಾತದ ಪೂರ್ವದಲ್ಲಿ ಸದರಿ ರಸ್ತೆಯನ್ನು ಹೊಸದಾಗಿ ನಿರ್ಮಿಸಿದ್ದಾರೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಸಾಕಷ್ಟು ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಚಾಸಾ.11 ರವರ ಮೊಬೈಲ್

ನಂಬರ್ ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ಆದರೆ ಮೊಬೈಲ್ ನಲ್ಲಿ ಇದೆ ಎಂದು ನುಡಿಯುತ್ತಾರೆ. ಚಾಸಾ.11 ರವರು ಘಟನೆ ಬಗ್ಗೆ ಹೇಳಿದ ಆಧಾರದ ಮೇಲೆ ನಾನು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ದೂರು ನೀಡುವ ಪೂರ್ವದಲ್ಲಿ ಚಾಸಾ.11 ರವರನ್ನು ಹೊರತುಪಡಿಸಿ ಬೇರೆ ಯಾರನ್ನು ನಾನು ವಿಚಾರಣೆ ಮಾಡಿಲ್ಲ. ನಿಪಿ.1 ನ್ನು ಪೊಲೀಸರು ಬೆರಳಚ್ಚು ಪಡಿಸಿರುತ್ತಾರೆ. ಸದರಿ ನಿಪಿ.1 ನ್ನು ಬೆರಳಚ್ಚು ಪಡಿಸಿದ ನಂತರ ನನಗೆ ಸಹಿ ಮಾಡು ಎಂದು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಅಪಘಾತಪಡಿಸಿದ ಟ್ರ್ಯಾಕ್ಟರ್ ನಂಬರ್ ನನಗೆ ಗೊತ್ತಿಲ್ಲ. ಅಪಘಾತದ ಸಂದರ್ಭದಲ್ಲಿ ನನ್ನ ಮಗನಿಗೆ ಚಾಲನಾ ಪರವಾನಿಗೆ ಇತ್ತು. ಆದರೆ ಬೈಕಗೆ ವಿಮೆ ಇರಲಿಲ್ಲ. ನನ್ನ ಮಗನ ಚಾಲನಾ ಪರವಾನಿಗೆ ಪತ್ರವನ್ನು ನಾನು ನೋಡಿಲ್ಲ. ಚಾಸಾ.10 ನನ್ನ ಮಗ ತನ್ನ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಸದರಿ ಅಪಘಾತ ಸಂಬವಿಸಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಟ್ರ್ಯಾಕ್ಟರ್ ಗೆ ಬಲಭಾಗದ ಹೆಡ್ ಲೈಟ್ ಇಲ್ಲದ ಕಾರಣ ಟ್ರ್ಯಾಕ್ಟರ್ ಕಾಣದೇ ಬೈಕ್ ಟ್ರ್ಯಾಕ್ಟರ್ ಗೆ ಡಿಕ್ಕಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಟ್ರ್ಯಾಕ್ಟರ್ ನ ಹೆಡ್ ಲೈಟ ಕಾಣದ ಕಾರಣ ಅಪಘಾತ ಸಂಬವಿಸಿರುತ್ತದೆ ಎಂದರೆ ಸಾಕ್ಷಿಯು ಟ್ರ್ಯಾಕ್ಟರ್ ವೇಗವಾಗಿ ಇದ್ದುದರಿಂದ ಅಪಘಾತ ಸಂಬವಿಸಿರುತ್ತದೆ ಎಂದು ನುಡಿಯುತ್ತಾರೆ. ಟ್ರ್ಯಾಕ್ಟರ್ ಗೆ ಬಲಭಾಗದ ಹೆಡ್ ಲೈಟ ಇಲ್ಲದ್ದನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ಚಾಸಾ.10 ರವರಿಗೆ ಪರಿಹಾರ ಕೊಡಿಸಬೇಕೆಂಬ ಉದ್ದೇಶದಿಂದ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲದಿದ್ದರೂ ಸಹ ಆರೋಪಿ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ